MR. SPEAKER.— I do not want to waste the time. Next question please.

SRI N. B. SIRDESAI.— Whether the Government can provide me the break-up figures of amounts allotted under I.C.R.C. programme andKarnataka Roads and Bridges Fund?

ಶ್ರೀ ಸುಧೀಂದ್ರ ರಾವ್ ಕಸಬೆ.— ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಕೇಳುತ್ತಾ ಇರತಕ್ಕ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಅವರು ಈ ಪ್ರಶ್ನೆಯನ್ನು ಮೊದಲೇ ಕೇಳಿದ್ದರೆ ಲೋಕೋಪಯೋಗಿ ಇಲಾಖೆಯಿಂದ ಉತ್ತರವನ್ನು ತರಿಸಬಹುದಾಗಿತ್ತು. ಮಾನ್ಯ ಸದಸ್ಯರು ಇದರ ಬಗ್ಗೆ ಬೇರೆ ಪ್ರಶ್ನೆಯನ್ನು ಕಳುಹಿಸಿದರೆ ನಾನು ಉತ್ತರ ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

Pensionary and other Service Benifits to Teachers of Private High Schools in North Kanara District.

334. SRI BHAVU RAO DESHPANDE (Dharwad).— Will the Minister for Education be pleased to state :

(*a*) whether it has come to the notice of the Government that the demands have been received from the teachers of the Private High Schools of North Canara District, for grant of Pension and other benifits to them on par with Government High School teachers;

(*b*) if so, the action taken by the Government so far in this regard ?

SRI G. B. SHANKAR RAO (Minister for Education).—

(*a*) Yes.

(*b*) These demands are under consideration of the Government.

ಶ್ರೀ ಭಾವುರಾವ್ ದೇಶಪಾಂಡೆ.— ಅಧ್ಯಕ್ಷರೆ, ಈಗ ಉತ್ತರ ಕರ್ನಾಟಕ ಜಿಲ್ಲೆಯಲ್ಲಿಯಂ ಖಾಸಗಿ ಪ್ರೌಢಶಾಲೆಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಿಗೆ ಯಾವ ರೀತಿ ಪೆನ್‌ಷನ್, ಗ್ರಾಚ್ಯುಟಿ ಈ ಮನೆ ಬಾಡಿಗೆ ಸೌಲಭ್ಯ ಇತ್ಯಾದಿ ಸೌಲಭ್ಯಗಳು ಏನಿವೆ ಅವುಗಳೆಲ್ಲಾ ತಮಗೂ ಸಿಗಬೇಕೆಂದು ಕೇಳಿರುವು ದಕ್ಕೆ ಅದಂ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗ ಇದು ಯಾವ ಹಂತದಲ್ಲಿದೆ ಅಥವಾ ಇದನ್ನು ಬೇಗ ಮಾಡಲಿಕ್ಕೆ ಸರ್ಕಾರಕ್ಕೆ ಏನಾದರೂ ಅಡಚಣೆ ಇದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಿ. ಶಂಕರ್ ರಾವ್.— ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಶಿಕ್ಷಕರು ೧೯೭೯ನೇ ಡಿಸೆಂಬರ್‌ನಲ್ಲಿ ಒಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕ ಮನವಿಯಲ್ಲಿ ಸಾಕಷ್ಟು ಬೇಡಿಕೆಗಳು ಇವೆ. ಅವರ ಬೇಡಿಕೆಗಳಲ್ಲಿ ಪ್ರಮುಖವಾದ ಬೇಡಿಕೆಗಳು ಐದಾರು ಇವೆ. ಒಂದು, ನಿವೃತ್ತಿ ವೇತನವನ್ನು ಶೇಕಡಾ ೫೦ರಷ್ಟು ಮಾಡಬೇಕು ಅಂತ ಇದೆ. ಇದರ ಬಗ್ಗೆ ಈಗಾಗಲೇ ಹೇಳಿ ಬಿಟ್ಟಿದ್ದೇವೆ. ಸರ್ಕಾರಿ ನೌಕರನಿಗೆ ಏನು ನಿವೃತ್ತಿ ವೇತನ ಕೊಡುತ್ತಿದ್ದೇವೆ. ಅಂದರೆ ಅವರು ಕೊನೇ ತಿಂಗಳಂ ಸಂಬಳ ಏನು ತೆಗೆದುಕೊಳ್ಳುತ್ತಾರೆ ಆ ಸಂಬಳದ ಅರ್ಧದಷ್ಟು ಭಾಗ ಮಾತ್ರ ನಿವೃತ್ತಿ ವೇತನ ಇರತಕ್ಕದ್ದು ಎಂದು ಹೇಳಿದ್ದೇವೆ. ಇದನ್ನು ಖಾಸಗಿ ಶಿಕ್ಷಕರಿಗೂ ಕೂಡ ಮಾಡಿಕೊಡುತ್ತೇವೆ.

ಗ್ರಾಚ್ಯುಟಿಯ ವಿಚಾರದಲ್ಲಿ ಅವರು ನಮ್ಮ ಜೊತೆ ಚರ್ಚೆ ಮಾಡಿದ ಬಳಿಕ ಅದಕ್ಕೆ ನಾವು ಒಪ್ಪಿ ಕೊಂಡಿದ್ದೇವೆ. ಮ್ಯಾನೇಜ್‌ಮೆಂಟಿನವರು ೧ ಲಕ್ಷದ ೨೫ ಸಾವಿರ ರೂ.ಗಳನ್ನು ಕೊಟ್ಟರೆ ಸಾಕಾಗುತ್ತದೆ

ಎಂಬುದಾಗಿ ಹೇಳಿದ್ದಾರೆ. ಅದಕ್ಕೆ ಸರ್ಕಾರದವರು ನೋಡುತ್ತೇವೆಂದು ಹೇಳಿದ್ದೇವೆ. ಇದಕ್ಕೆ ಸಾಕಷ್ಟು ಹಣ ಸರ್ಕಾರದಿಂದ ಖರ್ಚಾಗುತ್ತದೆ. ಆದರೂ ಅದನ್ನು ಒಪ್ಪುವಂತಹ ಸ್ಥಿತಿಯಲ್ಲಿದ್ದೇವೆ. ಮತ್ತೆ ೧೦ ವರ್ಷಗಳ ಕಾಲ ಸೇವೆ ಮಾಡಿರತಕ್ಕಂತಹವರಿಗೆ ಮುಂಬಡ್ತಿಯನ್ನು ಕೊಡಬೇಕೆಂದು ಕೇಳಿದ್ದಾರೆ. ಆಂದಾಗ ಇದು ಸೆಲೆಕ್ಷನ್ ಗ್ರೇಡ್ ಆಗುವುದರಿಂದ ಈ ಸೌಲಭ್ಯವನ್ನು ಇದುವರೆಗೂ ಸರ್ಕಾರಿ ನೌಕರರ್ಯಾರಿಗೂ ಕೊಟ್ಟಿಲ್ಲವಾದ್ದರಿಂದ ಇವರಿಗೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೆಚ್ಚಿನ ವಿದ್ಯಾರ್ಹತೆ ಇರುವವರಿಗೆ ಮುಂಬಡ್ತಿಯನ್ನು ಕೊಡಬೇಕೆಂದು ಕೇಳಿದ್ದಾರೆ. ಆದರೆ ಆ ರೀತಿ ಸರ್ಕಾರಿ ನೌಕರರ್ಯಾರಿಗೂ ಕೊಟ್ಟಿಲ್ಲ. ಆದ್ದರಿಂದ ಇವರಿಗೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನುಳಿದ ಬೇಡಿಕೆಗಳು ಆಷ್ಟೇನೂ ಮಹತ್ವವಾದವುಗಳಲ್ಲ. ಎಂಬುದಾಗಿ ತಿಳಿದು ಆವುಗಳನ್ನು ಸರ್ಕಾರ ಒಪ್ಪಿಕೊಳ್ಳದೆ ಕೈಬಿಡ ಲಾಗಿದೆ. ಪ್ರಮುಖವಾದ ಈ ಎರಡು ಬೇಡಿಕೆಗಳ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ತೆಗೆದು ಕೊಂಡಿದೆ ಎಂಬುದನ್ನು ತಿಳಿಸುತ್ತಾ, ಬಹುಭಾಗದ ಬೇಡಿಕೆಗಳನ್ನು ಸರ್ಕಾರ ಒಪ್ಪಿಕೊಂಡಂತಾಗಿದೆಯೆಂದು ಹೇಳುತ್ತೇನೆ.

ಶ್ರೀ ಭಾಪೂರಾವ್ ದೇಶಪಾಂಡೆ.— ಸರೆಂಡರ್ ಲೀವ್ ಬಗ್ಗೆ ಮತ್ತು ಮನೆ ಬಾಡಿಗೆ ಕೊಡುವು ದರ ಬಗ್ಗೆ ತಾವು ಏನು ಯೋಚನೆ ಮಾಡಿದ್ದೀರಿ?

ಶ್ರೀ ಜಿ. ಬಿ. ಶಂಕರ್ ರಾವ್.— ಖಾಸಗಿ ಶಾಲೆಯ ಉಪಾಧ್ಯಾಯರುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಮಾಡುವುದಿಲ್ಲ. ಅವರು ಒಂದೇ ಕಡೆ ಇರುವುದರಿಂದ ಅವರುಗಳಿಗೆ ಮನೆ ಬಾಡಿಗೆ ಭತ್ಯವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಖಾಸಗಿ ಶಾಲೆಯ ಶಿಕ್ಷಕರ ಬಗ್ಗೆ ಮಾನ್ಯ ಮಂತ್ರಿಗಳು ಅವರ ಕೆಲವು ಬೇಡಿಕೆಗಳನ್ನು ಒಪ್ಪಿಕೊಂಡಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ. ಅದನ್ನು ನಾನು ಸ್ವಾಗತ ಮಾಡು ತ್ತೇನೆ. ಆದರೆ ಹೆಚ್ಚಾಗಿ ತವಗೆ ಗೊತ್ತಿರುವಂತಹ ಉತ್ತರ ಕರ್ನಾಟಕ ಮತ್ತು ಬೇರೆ ಬೇರೆ ಭಾಗಗಳಲ್ಲಿ ಸರ್ಕಾರಿ ಶಾಲೆಗಳೇ ಇರುವುದಿಲ್ಲ. ಅಲ್ಲಿ ಖಾಸಗಿ ಶಾಲೆಗಳೇ ಹೆಚ್ಚು ಇವೆ. ಇದರಿಂದಾಗಿ ಖಾಸಗಿ ಶಾಲಾ ಶಿಕ್ಷಕರು ಮತ್ತು ಸರ್ಕಾರಿ ಶಾಲಾ ಶಿಕ್ಷಕರಿಗೆ ಇರತಕ್ಕಂತಹ ತಾರತಮ್ಯವನ್ನು ತೆಗೆದು ಹಾಕುವುದಕ್ಕೆ ಸರ್ಕಾರ ವಿನಾದರೂ ಆಲೋಚನೆ ಮಾಡಿದೆಯೇ ? ಎರಡನೆಯ ಪ್ರಶ್ನೆ ಏನೆಂದರೆ ಮನೆ ಬಾಡಿಗೆ ಬಗ್ಗೆ ಹೇಳುವುದಾದರೆ, ಖಾಸಗಿ ಶಾಲಾ ಶಿಕ್ಷಕರನ್ನೂ ಸಹ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗ ಮಾಡುತ್ತಿರುತ್ತಾರೆ. ಏಕೆಂದರೆ ಒಂದೊಂದು ಸಂಸ್ಥೆಗಳಲ್ಲಿ ೫೦ ಶಾಲೆಗಳಿರುತ್ತವೆ. ಉದಾಹರಣೆಗೆ ಕೆ.ಎಲ್.ಇ. ಸೊಸೈಟಿಯನ್ನು ತೆಗೆದುಕೊಳ್ಳುವುದಾದರೆ. ಬೆಳಗಾಂನಿಂದ ಹುಬ್ಬಳ್ಳಿಗೆ ವರ್ಗ ಮಾಡುತ್ತಾರೆ. ಹುಬ್ಬಳ್ಳಿಯಿಂದ ಬಿಜಾಪುರಕ್ಕೆ ವರ್ಗ ಮಾಡುತ್ತಾರೆ. ಪ್ರಮುಖವಾಗಿ ಒಂದು ನಗರದಿಂದ ಮತ್ತೊಂದು ನಗರಕ್ಕೆ ವರ್ಗ ಮಾಡುತ್ತಾರೆ. ಆದ್ದರಿಂದ ನಮಗೂ ಬಾಡಿಗೆ ಕೊಡಬೇಕೆಂದು ಅವರು ಬಹಳ ವರ್ಷ ಗಳಿಂದಲೂ ಕೇಳುತ್ತಿದ್ದಾರೆ. ಆದಕಾರಣ ಸರ್ಕಾರಿ ಶಾಲಾ ಶಿಕ್ಷಕರಿಗೆ ಕೊಡುವಂತೆ ಇವರಿಗೂ ಮನೆ ಬಾಡಿಗೆಯನ್ನು ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಾನೆಯೇ?

ಶ್ರೀ ಜಿ. ಬಿ. ಶಂಕರ್ ರಾವ್,— ಇದು ಸರ್ವೇಸಮಾನ್ಯವಾದ ಪ್ರಶ್ನೆಯಾಯಿತು. ಮನೆ ಬಾಡಿಗೆ ವಿಚಾರದಲ್ಲಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದರಂತೆ ಖಾಸಗಿ ಶಾಲೆಗಳ ಮ್ಯಾನೆಜ್‌ಮೆಂಟಿನವರು ಶಿಕ್ಷಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸುವುದನ್ನು ತಡೆಹಿಡಿಯಬೇಕು. ಖಾಸಗಿ ಶಾಲಾ ಮ್ಯಾನೇಜ್‌ಮೆಂಟ್‌ನವರು ಈ ರೀತಿ ಶಿಕ್ಷಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆ ವರ್ಗ ಮಾಡಿಸುವುದಕ್ಕೆ ಅವಕಾಶ ಇಲ್ಲ. ಮತ್ತೆ ಉತ್ತರ ಕರ್ನಾಟಕದಲ್ಲಿ ಸರ್ಕಾರೀ ಶಾಲೆಗಳೇ ಇಲ್ಲ ಎಂಬುದಾಗಿ ಹೇಳಿದ್ದಾರೆ. ಇದು ಆ ಭಾಗದಲ್ಲಿ ಬೊದಲಿನಿಂದಲೂ ನಡೆದುಕೊಂಡು ಬಂದಿದೆ. ಈಗ ಎಲ್ಲ ಕಡೆ ಸರ್ಕಾರಿ ಶಾಲೆಗಳನ್ನು ಆದ್ಯತೆ ಮೇರೆಗೆ ಕೊಡುತ್ತಾ ಬಂದಿದ್ದೇವೆ. ಇದನ್ನು ಹೀಗೆ ಬಿಡುವುದಕ್ಕಾಗುವುದಿಲ್ಲ. ಒಂದೇ ಸಾರಿ ಎಲ್ಲಾ ಕಡೆ ಸರ್ಕಾರಿ ಶಾಲೆಗಳನ್ನು ಮಾಡುವುದಕ್ಕೆ ಹೆಚ್ಚಿನ ಹಣಕಾಸನ್ನು ಒದಗಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ಕ್ರಮೇಣವಾಗಿ ಪರಿಹಾರ ಮಾಡುವುದಕ್ಕೆ ಸಾಧ್ಯ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ.

ಶ್ರೀ ಭಾವುರಾವ್ ದೇಶಪಾಡೆ.— ಸರ್ಕೆಂಡರ್ ಲೀವ್ ಬಗ್ಗೆ ತಾವು ಏನೂ ಹೇಳಲಿಲ್ಲ. ಮತ್ತೆ ಹೌಸ್ ರೆಂಟ್ ಬಗ್ಗೆ ಹೇಳುವುದಾದರೆ ಈಗಾಗಲೇ ನನ್ನ ಮಿತ್ರರು ಹೇಳಿದ ಹಾಗೆ ಖಾಸಗಿ ಶಾಲಾ ಶಿಕ್ಷಕರನ್ನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗ ಮಾಡುತ್ತಿರುತ್ತಾರೆ. ಅವರಿಗೂ ಮನೆ ಬಾಡಿಗೆ ಭತ್ಯವನ್ನು ಕೊಡಿಸುವುದಕ್ಕೆ ಸೂಕ್ತ ಏರ್ಪಾಡು ಮಾಡುತ್ತೀರಾ?

ಶ್ರೀ ಜಿ. ಬಿ. ಶಂಕರ್ ರಾವ್.— ಖಾಸಗಿ ಸಂಸ್ಥೆಯ ಶಿಕ್ಷಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗ ಮಾಡುವುದು ಸರಿಯಲ್ಲ. ಒಂದು ವೇಳೆ ವರ್ಗ ಮಾಡಿದರೂ ಅವರು ಕೆಲವು ನಿಯಮಿತವಾದ ಸ್ಥಳಗಳಿಗೆ ಮಾತ್ರ ವರ್ಗ ಮಾಡಬಹುದು. ಆದರೆ ಸರ್ಕಾರಿ ಶಾಲಾ ಶಿಕ್ಷಕರನ್ನು ರಾಜ್ಯದ ಯಾವ ಭಾಗಕ್ಕೆ ಬೇಕಾದರೂ ವರ್ಗ ಮಾಡಬಹುದು. ಆ ರೀತಿ ಅವರನ್ನು ವರ್ಗ ಮಾಡಿದರೆ ಅವರಿಗೆ ಅಲ್ಲಿ ಮನೆಯ ಸೌಕರ್ಯ ಇರುವುದಿಲ್ಲ. ಅಂತಹ ಕಡೆ ಅವರಿಗೆ ಮನೆ ಬಾಡಿಗೆ ಭತ್ಯವನ್ನು ಕೊಡಬೇಕಾಗುತ್ತದೆ. ಆದರೆ ಅದೇ ರೀತಿ ಖಾಸಗಿ ಶಾಲಾ ಶಿಕ್ಷಕರಿಗೂ ಕೊಡುವುದಕ್ಕಾಗುವುದಿಲ್ಲ.

Construction of Elevated Water tanks in Gulbarga City

368. SRI QUAMARUL ISLAM (Gulbarga).—Will the Minister for Housing and Urban Development be pleased to state:—

(a) the progress of the scheme sanctioned during the year 1979-80 for the construction of the Elevated Water Tanks 2 in Gulbarga City for proper distribution of water ;

(b) the state of the Scheme at present ?

SRI DHARM SINGH.—(Minister for Housing and Urban Development).—

(a) The scheme for construction of two elevated water tanks in Gulbarga City has not been sanctioned.

(b) In view of reply to clause (a) above, this question does not arise.

SRI DHARM SINGH.—Sir, the Hon. Member has asked this question on 10th March 1980 and we have furnished the reply on 29th April, 1980. Subsequently the Government has sanctioned the Bennithora scheme and on 15-6-1980, the Hon'ble Chief Minister has laid the foundation stone. In that scheme, we have included 6 high level over-head tanks, 2 ground level reservoir tanks etc., The cost of that scheme comes to Rs. 51 lakhs or so. We have already started the work. Therefore, I don't think the Hon. Member would like to put supplementaries.